(ಸಾಕ್ಷಿಯನ್ನು ದಿಃ 6–2–2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು. )

(ಸಾಕ್ಷಿಯು ತನಗೆ ಕೊಂಕಣಿ ಭಾಷೆ ಮಾತ್ರ ಗೊತ್ತಿದ್ದು ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳಿದ ಕಾರಣ ಇಬ್ಬರು ವಕೀಲರ ಸಮ್ಮತಿ ಮೇರೆಗೆ ಶ್ರೀ ಎ ಸಿ ಎಮ್ ವಕೀಲರನ್ನು ಭಾಷಾಂತರಕಾರನ್ನಾಗಿ ನೇಮಿಸಿ ಪ್ರಮಾಣ ವಚನವನ್ನು ಭೋಧಿಸಿ ಪ್ರತಿಜ್ಞಾ ಪೂರ್ವಕವಾಗಿ ತರ್ಜುಮೆಗೊಳಿಸಲು ನೇಮಿಸಿಕೊಳ್ಳಲಾಯಿತು).

**ಪಾಟಿ ಸವಾಲುಃ ವಾದಿ ಪರವಾಗಿಃ ಶ್ರೀ ಜಿ ಟಿ ಎನ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿರುತ್ತದೆ. ನನ್ನ ಮತ್ತು ವಾದಿಯ ನಡುವೆ ಆಗಿರುವ ವ್ಯವಹಾರದ ಬಗ್ಗೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ವಾದಿಯು ಬಂಗಾರದ ಕೆಲಸವನ್ನು ಮಾಡುತ್ತಿದ್ದರು. ನಾನು ವಾದಿಯಿಂದ ಬಂಗಾರವನ್ನು ಸಾಲದ ಮೇಲೆ ಖರೀದಿಸುತ್ತೀದ್ದೇನು. ನನ್ನ ಹತ್ತಿರ ಹಣವಿಲ್ಲದಿದ್ದ ಸಂದರ್ಬದಲ್ಲಿ ನಾನು ವಾದಿಗೆ ಚೆಕ್ಕನ್ನು ಕೊಡುತ್ತೀದ್ದೇನು. ಆಗ ವಾದಿ ನನಗೆ ಬಂಗಾರವನ್ನು ಕೊಡುತ್ತಿದ್ದನು. ಇದೇ ರೀತಿ ನನ್ನ ಮತ್ತು ವಾದಿ ನಡುವೆ ಬಂಗಾರದ ವ್ಯವವಹಾರ ನಡೆಯುತ್ತಿತ್ತು. ನನ್ನ ಹತ್ತಿರ ಹಣವಿದ್ದಾಗ ಬಂಗಾರದ ಹಣವನ್ನು ವಾದಿಗೆ ಕೊಡುತ್ತೀದ್ದೇನು. ನಾನು ನಮ್ಮ ಮನೆಯವರಿಗೆ ಬಂಗಾರವನ್ನು ವಾದಿಯಿಂದ ಖರೀದಿಸುತ್ತೀದ್ದೇನು. ನಾನು ವಾದಿಗೆ ಹಣ ಕೊಟ್ಟರೂ ಸಹ, ನಾನು ಕೊಟ್ಟ ಚೆಕ್ಕು ವಾದಿ ಹತ್ತಿರವೇ ಉಳಿಯುತ್ತಿತ್ತು. ನಾನು ವಿಶ್ವಾಸದ ಮೇಲೆ ವಾದಿಗೆ ಕೊಟ್ಟ ಚೆಕ್ಕನ್ನು ವಾಪಸ್ ಕೇಳುತ್ತೀರಲಿಲ್ಲ.

ನಾನು ವಾದಿಗೆ ಎರಡು ಬಾಂಡ್ ಪೇಪರಗಳ ಮೇಲೆ ಸಹಿಯನ್ನು ಮಾಡಿಕೊಟ್ಟಿದ್ದೇನು. ಈಗ ನನಗೆ ನಿಪಿ–3 ರ ಚೆಕ್ಕನ್ನು ತೋರಿಸುತ್ತಿದ್ದು ಅದನ್ನು ನಾನು ವಾದಿಗೆ ಕೊಟ್ಟ ಚೆಕ್ಕಾಗಿರುತ್ತದೆ ಎಂದರೆ ನಿಜ. ಈಗ ನನಗೆ ನಿಪಿ–8 ರ ಕರಾರು ಪತ್ರವನ್ನು ತೋರಿಸುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿಯಲ್ಲ. ನಿಪಿ–8 ರ ಕರಾರು ಪತ್ರದ ಬಾಂಡ ಪೇಪರನ್ನು ನಾನು ವಾದಿಗೆ ಬರೆದು ಕೊಟ್ಟಿರುವುದಿಲ್ಲ. ನಿಪಿ–8 ರ ಬಾಂಡ ಪೇಪರನ್ನು ನಾನೇ ಖರೀದಿಸಿರುತ್ತೇನೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ.

ಕಾರವಾರದ ಕೆ ಟಿ ಭೂತೆ ವಕೀಲರು ನನಗೆ 15 ವರ್ಷಗಳಿಂದ ಪರಿಚಯವಿರುತ್ತಾರೆ. ಪ್ರದೀಪ ನಾರಾಯಣ ಕುರ್ಡೇಕರ ರವರ ಪರಿಚಯ ನನಗೆ ಇರುವುದಿಲ್ಲ. ಅಭಿಷೇಕ ಸುರೇಶ ಕಲ್ಲುಟಕರರವರ ಪರಿಚಯ ನನಗೆ ಇರುವುದಿಲ್ಲ. ವಾದಿಯು ನನ್ನ ಮೇಲೆ ಪೋಲಿಸ್

ಠಾಣೆಯಲ್ಲಿ ಒಂದು ದೂರು ಕೊಟ್ಟಿದ್ದರು ಎಂದರೆ ನಿಜ. ವಾದಿಯು ನನ್ನ ವಿರುದ್ಧ ಕಾರವಾರದ ಜೆ ಎಮ್ ಎಫ್ ಸಿ ನ್ಯಾಯಾಲಯದಲ್ಲಿ ಒಂದು ದೂರನ್ನು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಕಾರವಾರದ ನ್ಯಾಯಾಲಯಗಳಲ್ಲಿ ನನಗೆ ಸಂಬಂದಪಟ್ಟಂತೆ ಎರಡು ಕೇಸುಗಳು ಇರುತ್ತವೆ. ಅವುಗಳ ಪೈಕಿ ಒಂದು ಚೆಕ್ ಬೋನ್ಸ ಕೇಸುಯಾಗಿರುತ್ತದೆ ಎಂದರೆ ನಿಜ. ಮತ್ತೊಂದು ಚೀಟಿಂಗ್ ಕೇಸು ಎಂದರೆ ಸರಿಯಲ್ಲ, ಆದರೆ ಸದರಿ ಕೇಸನ್ನು ನಾನು ನನ್ನ ತಮ್ಮನ ಮೇಲೆ ಹಾಕಿರುತ್ತೇನೆ. ನನ್ನ ತಮ್ಮನ ಹೆಸರು ವಿಜಯ ಗಜಿನಕರ ಎಂದರೆ ನಿಜ. ನಾನು ನನ್ನ ತಮ್ಮನ ಹಣವನ್ನು ಪಡೆದುಕೊಂಡು ಮೋಸ ಮಾಡಿದ್ದೇನೆ ಎಂದು ಆತನು ನನ್ನ ವಿರುದ್ಧ ಕೇಸನ್ನು ಹಾಕಿರುತ್ತಾನೆ ಎಂದರೆ ನಿಜ. ನಾನು ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿಗೂ ಮತ್ತು ನನಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯ ಪರವಾಗಿ ನಿಪಿ-8ರ ದಾಖಲಾತಿಯನ್ನು ಸಾಕ್ಷಿದಾರರ ಸಮಕ್ಷಮ ಮತ್ತು ನೋಟರಿಯವರ ಸಮಕ್ಷಮ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 517/1ರ 1 ಗುಂಟೆ 8 ಆಣೆ ಜಮೀನು ನನಗೆ ಸಂಬಂಧಪಟ್ಟಿದೆ ಎಂದರೆ ನಿಜ. ನಾನು ವಾದಿಗೆ 3 ಲಕ್ಷ ನಗದು ಹಣ ಮತ್ತು 1 ಲಕ್ಷ ಚೆಕ್ಕು ಹಣ ಹೀಗೆ ಒಟ್ಟೂ 4 ಲಕ್ಷ ಹಣವನ್ನು ಎಪ್ರಿಲ್ 2012 ರಿಂದ ಬಡ್ಡಿ ಸೇರಿಸಿ ಕೊಡಬೇಕಾಗಿದೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಕೊಡದಿದ್ದ ಸಂದರ್ಬದಲ್ಲಿ ನಾನು ದಾವಾ ಸ್ವತ್ತನ್ನು ವಾದಿಗೆ ಕ್ರಯ ಮಾಡಿ ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ವಾದಿಗೆ ನಾನು 4 ಲಕ್ಷ ಹಣವನ್ನು ಚೆಕ್ಕಿನ ಮೂಲಕ ಅಥವಾ ಡಿಮಾಂಡ್ ಡ್ರಾಫ್ಟ ಮೂಲಕ ಅಥವಾ ಪೇ ಆರ್ಡರ ಮೂಲಕ ಕೊಡಿ ಎಂದು ನಾನೇನು ಕೇಳಿರಲಿಲ್ಲ. ವಾದಿಗೆ ಕೊಡಬೇಕಾದಂತಹ 4 ಲಕ್ಷ ಹಣವನ್ನು ತಪ್ಪಿಸುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.